ಶ್ರೀ ಧ್ರುವ ನಾರಾಯಣ ಆರ್(ಸಂತೇಮರಳ್ಳಿ) 98 (319)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ)ಕರ್ನಾಟಕ ಗೃಹ ಮಂಡಳಿಯ ವಸತಿ ಗೃಹ ಮತ್ತು ನಿವೇಶನ ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನೀಡಲಾಗುತ್ತಿರುವ ಮೀಸಲಾತಿ ಪ್ರಮಾಣ ಎಷ್ಟು?

ಆ) ಈ ವರ್ಗಗಳಿಗೆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಯೋಜನೆ ಗೃಹ ಮಂಡಳಿಯ ಮುಂದಿದೆಯೇ?

ಶ್ರೀ ಡಿ.ಟಿ.ಜಯಕುಮಾರ್

ಅ) ಕರ್ನಾಟಕ ಗೃಹ ಮಂಡಳಿಯ ಯೋಜನಾ ನಿಯಮಾವಳಿ 1983 ರಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಪಂಗಡಗಳಿಗಾಗಿ ಮಂಡಳಿಯು ಅಭಿವೃದ್ಧಿಪಡಿಸುವ ನಿವೇಶನ ಹಾಗೂ ಮನೆಗಳಲ್ಲಿ ಶೇಕಡವಾರು 18% ರಂತೆ ಕಾಯ್ದಿರಿಸಲಾಗುತ್ತದೆ.

ಆ) ಪ್ರಸ್ತುತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ ಮಂಡಳಿಯ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.